








"ವೈಟ್ನರ್" ಕೊಡಿ ಸಾರ್... ಹಳೇ ಅರ್ಜಿಗೆ ಈ ವರ್ಷದ ದಿನಾಂಕ ಬರೆದು ಕೊಡ್ತೀನಿ...!!

ರಾತ್ರಿ ಗಂಡ ಹೆಂಡತಿ ಜಗಳ, ಬೆಳಗ್ಗೆ ಕೋಪದಿಂದ ಹೆಂಡತಿ ಏಳಲಿಲ್ಲ. ಪತಿಯೇ ಮಕ್ಕಳಿಗೆ ತಿಂಡಿ ಮಾಡಿ ಶಾಲೆಗೆ ರೆಡಿ ಮಾಡಿದ. ಪತ್ನಿ ಹಾಸಿಗೆ ಮೇಲೆ ಕುಳಿತುಕೊಂಡು ದುರುಗುಟ್ಟಿ ನೋಡುತ್ತಿದ್ದಳು. ಗಂಡ ಮಕ್ಕಳನ್ನು ಶಾಲೆಗೆ ಕರೆದುಕೊಂಡು ಹೋಗುವಾಗ ಹೆಂಡ್ತಿ ಎದ್ದು ಹೇಳಿದಳು, ನಿಲ್ಲು ಮಾರಾಯ 'ಇಂದು ಭಾನುವಾರ'.

ಸುಬ್ಬ: ನದಿಗಳಿಗೆ ಮಹಿಳೆಯರ ಹೆಸರು, ಪರ್ವತಗಳಿಗೆ ಪುರುಷರ ಹೆಸರು ಇಡುತ್ತಾರೆ ಯಾಕೆ ಅಂತ ಗೊತ್ತಾ?
ಮಬ್ಬ: ಹೆಂಗಸರು ಕೂತ ಕಡೆ ಕೂರಲ್ಲ, ಆ ಗುಣವು ನದಿ ನೀರಿಗೂ ಇರುವುದರಿಂದ ಮಹಿಳೆಯರ ಹೆಸರು ಇಡುತ್ತಾರೆ. ಆದರೆ, ಗಂಡಸರು ಕೂತ ಕಡೆಯಿಂದ ಕದಲುವುದಿಲ್ಲ, ಎಲ್ಲ ಕೆಲಸವೂ ಕೂತಲ್ಲೆ ಆಗಬೇಕು. ಆ ಗುಣವನ್ನು ಗ್ರಹಿಸಿಯೇ ಪರ್ವತಗಳಿಗೆ ಗಂಡಸರ ಹೆಸರು ಇಡುತ್ತಾರೆ.

ಗುರು: ಬೆಂಕಿ ಇಲ್ಲದ ಒಲೆ, ಮೀನು ಇಲ್ಲದ ಬಲೆ, ವಿದ್ಯಾ ಹತ್ತದ ನಿನ್ನ ತಲೆ ಇದ್ದರೆಷ್ಟು, ಬಿಟ್ಟರೆಷ್ಟು?
ಶಿಷ್ಯ: ರುಚಿ ಇಲ್ಲದ ಊಟ, ಹೂವಿಲ್ಲದ ತೋಟ, ತಲೆಗೆ ಹತ್ತದ ನಿಮ್ಮ ಪಾಠ ಇದ್ದರೆಷ್ಟು ಬಿಟ್ಟರೆಷ್ಟು?

ಅತ್ತೆ: ನಿನ್ನ ಗಂಡ ನನ್ನ ಹೊಟ್ಟೆಯಲ್ಲಿದ್ದಾಗ, ನಾನು ಏನೇನು ಇಷ್ಟವಾದ ತಿಂಡಿ ತಿನಿಸುಗಳನ್ನು ತಿಂದಿದ್ದೆನೋ ಅದೆಲ್ಲ ಅವನಿಗೆ ಈಗಲೂ ಇಷ್ಟ.
ಸೊಸೆ: ಹೌದು ಅತ್ತೆ. ಆದರೂ ನೀವು ಗರ್ಭಿಣಿಯಾಗಿದ್ದಾಗ ಎಣ್ಣೆ ಮತ್ತು ಸಿಗರೇಟ್‌ನಿಂದ ದೂರ ಇರಬೇಕಾಗಿತ್ತು.

ಹೆಂಡತಿ: ಬೆಳಿಗ್ಗೆ ಎದ್ದು ಮ್ಯಾರೇಜ್ ಸರ್ಟಿಫಿಕೇಟ್ ಇಟ್ಕೊಂಡು ಏನು ಮಾಡ್ತಿದ್ದೀರಿ?
ಗಂಡ: ಇದರಲ್ಲಿ ಎಕ್ಸ್‌ಪೈರಿ ಡೇಟ್ ಎಲ್ಲಿದೆ ಅಂತ ಹುಡುಕ್ತಿದ್ದೀನಿ.
ಹೆಂಡತಿ: ಮ್ಯಾರೇಜ್ ಸರ್ಟಿಫಿಕೇಟ್‌ನಲ್ಲಿ ಎಕ್ಸ್‌ಪೈರಿ ಡೇಟ್ ಇರಂಗಿಲ್ಲ ಅಂತ ನನಗೂ ಗೊತ್ತಿರಲಿಲ್ಲ ರೀ.

ಮಿಕ್ಸಿ ಕೊಳ್ಳಲೆಂದು ಗಂಡ ಹೆಂಡತಿ ಅಂಗಡಿಗೆ ಹೋಗಿದ್ದರು. ಬಹಳ ಸಮಯದಿಂದ ಗಂಡ ಸೇಲ್ಸ್‌ಗರ್ಲ್ ಅನ್ನೇ ನೋಡುತ್ತಿದ್ದ. ಹೆಂಡತಿ ಗಂಡನ ಭುಜ ತಟ್ಟಿ ಹೇಳಿದಳು. 'ಎಕ್ಸ್‌ಚೇಂಜ್ ಆಫರ್ ಇರೋದು ಮಿಕ್ಸಿ ಮೇಲೆ ಮಾತ್ರ'.

ಮಗ: ಅಮ್ಮ ಹುಡುಗಿಗೆ ಪ್ರಪೋಸ್ ಮಾಡೋಕೆ ಯಾವ ದಿನ ಬೆಸ್ಟ್?
ಅಮ್ಮ: ಏಪ್ರಿಲ್ 1.
ಮಗ: ಯಾಕೆ?
ಅಮ್ಮ: ಒಪ್ಕೊಂಡ್ರೆ ಒಕೆ. ಒಪ್ಪದಿದ್ರೆ ಏಪ್ರಿಲ್ ಫೂಲ್ ಅಂತೇಳಿ ಬಿಡು.

ಮನೆ ಕೆಲಸದಾಕಿಯ ಸ್ಟೇಟಸ್ ಹೀಗಿತ್ತು... 'ಇವತ್ತು ಸಾಹೇಬ್ರಿಗೆ ರಾಖಿ ಕಟ್ಟಿದೆ, ಅವ್ರು 50 ಕೊಟ್ರು. ಆದ್ರೆ ಅಮ್ಮಾವರು ಅದ್ಯಾಕೋ ಖುಷಿಯಾಗಿ 5000 ಕೊಟ್ರು.

ಹೆಂಡತಿ: ಇಲ್ಲಿ ಕೇಳಿ, ಎಲ್ಲಿ ನಿಮಗೆ ಮರ್ಯಾದೆ ಸಿಗುವುದಿಲ್ಲವೋ, ಅಲ್ಲಿಗೆ ಹೋಗಲೇಬೇಡಿ.
ಗಂಡ: ಅಂದರೆ ನಾನು ಮನೆಗೂ ಬರೋದುಬೇಡ ಅಂತ ಹೇಳ್ತಾ ಇದಿಯಾ?

ಮನೆಗೆ ಹೊಸ ನಾಯಿ ತಂದೋನು ಒಬ್ಬ ಫೇಸ್‌ಬುಕ್‌ನಲ್ಲಿ ಫೋಟೊ ಹಾಕಿ ಈ ತರಹ ಬರೆದಿದ್ದ.
'ನಾನು ಈ ನಾಯಿ ತಂದೆ'

ತಂದೆ: ಸರ್ಕಾರಿ ಪಾಠ ಶಾಲೆಯಲ್ಲಿ ಉಪಾಧ್ಯಾಯರನ್ನು ಇಂಗ್ಲಿಷ್‌ನಲ್ಲಿ ಏನೆಂದು ಕರೀತಾರೆ?
ಮಗ: GST.
ತಂದೆ: ಏನು? ಸ್ಪಷ್ಟ ಸರಿಯಾಗಿ ಹೇಳು.
ಮಗ: ಹೌದಪ್ಪ ಗವರ್ನಮೆಂಟ್ ಸ್ಕೂಲ್ ಟೀಚರ್

ಟೀಚರ್: ಕಿಟ್ಟು ಯಾಕೆ ಸ್ಕೂಲ್‌ಗೆ ತಡ?
ಕಿಟ್ಟು: ಟೀಚರ್ ಕೋಳಿ ಕೂಗುವುದು ಲೇಟ್ ಆಯ್ತು.
ಟೀಚರ್: ನಮ್ಮ ಮನೆಯ ಹತ್ತಿರ 6 ಗಂಟೆಗೆ ಕೂಗುತ್ತೆ.
ಕಿಟ್ಟು: ಮೇಡಂ, ಆ ಕೋಳಿ ನಿಮ್ಮ ಮನೆಯಿಂದ ನಮ್ಮ ಮನೆಯ ಹತ್ತಿರ ಬರೋದಕ್ಕೆ 8 ಗಂಟೆ ಆಗುತ್ತದೆ.

ಸಂಗ್ರಹ: ಭಾರತೀ ಗಂಗಾಧರ್, ಬೆಂಗಳೂರು